ಜನತಾ ಮಾಧ್ಯಮ

12-02-2018 ಸೋಮವಾರ

ಪುಟ-3


# ಭಯಕ್ಕೆ ಸಾವಿರಾರು ರಂಬೆ ಕೊಂಬೆಗಳಿವೆ

ಭಯ ಎಂದರೇನು? ಅದು ಇದೆ ಎಂದು ನಿಮಗೆ ಗೊತ್ತಿರುವಾಗ, ಅದರ ಸ್ವರೂಪ ತಿಳಿದಿರುವಾಗ, ಅದರ ಮಿಡಿತ ತಿಳಿದಿರುವಾಗ, ನಿಮ್ಮ ಶರೀರ ಹೇಗೆ ಮುದುಡುತ್ತದೆ ಮತ್ತು ಬುದ್ಧಿ ಹೇಗೆ ಮಂಕಾಗುತ್ತದೆ ಎಂಬುದು ನಿಮಗೆ ಗೊತ್ತು. ಇದೆಲ್ಲ ನಿಮಗೆ ಗೊತ್ತಲ್ಲವೆ? ಇದು ವಸ್ತುಸ್ಥಿತಿ. ಅದು ನಿಮ್ಮ ನಿದ್ರೆ, ನಿತ್ಯ ಜೀವನಕ್ಕೆ ಭಾದಕ. ಅದು ಸಂಶಯ, ಖಿನ್ನತೆ, ಆತಂಕ ಇತ್ಯಾದಿಯನ್ನು ಉಂಟುಮಾಡುತ್ತದೆ. ಆಗ ನೀವು ಯಾವುದನ್ನೋ ನೆಚ್ಚಿಕೊಳ್ಳುತ್ತೀರಿ ಮತ್ತು ಅದು ಬದಲಾಗುವುದಿಲ್ಲ ಹಾಗೂ ಆದರಿಂದ ಭಯ ಉತ್ಪನ್ನವಾಗುವುದಿಲ್ಲ ಎಂದು ನಂಬುತ್ತೀರಿ. ಒಂದೋ ನಾವು ಭಯದ ಬೇರುಗಳನ್ನು ಕಿತ್ತೊಗೆಯಬೇಕು ಅಥವಾ ಅದರ ರೆಂಬೆಗಳನ್ನು ಕಡಿಯಬೇಕು. ನೀವು ಯಾವುದನ್ನು ಮಾಡುವವರಿದ್ದೀರಿ? ಸಾವಿರ ಭಯಗಳಿವೆ. ಜಗತ್ತಿನ ಸುಂದರ ಸೃಷ್ಟಿಗಳಲ್ಲಿ ಒಂದಾದ ವೃಕ್ಷದಂತೆ, ಕುರೂಪಿಯಾದ ಭಯಕ್ಕೆ ಸಾವಿರಾರು ರೆಂಬೆ ಕೊಂಬೆಗಳಿವೆ; ಎಲೆಗಳಿವೆ. ವಿಧವಿಧ ಅಭಿವ್ಯಕ್ತಿಗಳಿವೆ. ನೀವು ಈ ಅಭಿವ್ಯಕ್ತಿಗಳನ್ನು. ಮೇಲ್ಸ್ತರವನ್ನು ಅಥವಾ ಬಹಿರಂಗವನ್ನು ಮುಖಾಮುಖಿಯಾಗುವಿರಾ? ಅಥವಾ ನಾವು ಜೊತೆಗೂಡಿ ಅದರ ಬೇರುಗಳತ್ತ ಹೋಗೋಣ. ಭಯದ ಕಾರಣವೇನು ಎಂಬುದನ್ನು ಒಟ್ಟಿಗೆ ಕಂಡುಹಿಡಿಯೋಣ. ನನಗೆ ಭಯದ ಅಭಿವ್ಯಕ್ತಿಗಳೆಲ್ಲ ಗೊತ್ತು. ಹೀಗಾಗಿ ನಾವು ಅದರ ಮೂಲವನ್ನು ಕಂಡುಕೊಂಡರೆ, ಬಾಹ್ಯ ಅಭಿವ್ಯಕ್ತಿಗಳು ತಾನಾಗಿ ಉದುರಿ ಹೋಗುತ್ತವೆ.

ಹಾಗಿದ್ದರೆ ಭಯಕ್ಕೆ ಕಾರಣವೇನು? ವಿವರಣೆಯೇ ವಸ್ತುಸ್ಥಿತಿಯಲ್ಲ. ನೀವು ಒಂದು ಪರ್ವತದ ಸುಂದರ ಚಿತ್ರ ಬಿಡಿಸಬಹುದು. ಆದರೆ ಆ ಚಿತ್ರವೇ ಪರ್ವತವಲ್ಲ. ಆದರೆ ಭಯ ಎಂಬ ಶಬ್ದವು ಭಯವನ್ನುಂಟುಮಾಡುತ್ತದೆ. ಹೀಗಾಗಿ ನಾವು ಬಣ್ಣನೆ, ಶಬ್ದ ಇತ್ಯಾದಿಗಳ ಜೊತೆಗೆ ವ್ಯವಹರಿಸದೆ ಭಯದ ಆಳ ಹಾಗು ಶಕ್ತಿಯನ್ನು ಗಮನಿಸುವವರಿದ್ದೇವೆ. ನಾವು ಒಟ್ಟಿಗೆ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇವೆಯೇ ಹೊರತು ನಾನು ವಿವರಿಸಿದ್ದನ್ನು ನೀವು ಒಪ್ಪಿಕೊಳ್ಳುತ್ತಿಲ್ಲ. ನಾವು ಸತ್ಯವನ್ನು ನಮ್ಮಷ್ಟಕ್ಕೆ ಕಂಡುಕೊಳ್ಳುತ್ತಿದ್ದೇವೆ. ಹೀಗೆ ಮಾಡುವ ಮೂಲಕ ಅದು ನಿಮ್ಮ ಸತ್ಯವಾಗುವುದೇ ಹೊರತು ಬೇರೆಯವರ ಸತ್ಯವಾಗುವುದಿಲ್ಲ. ಬೇರೆಯವರ ಸತ್ಯದೊಂದಿಗೆ ನೀವು ಬದುಕಲು ಸಾಧ್ಯವಿಲ್ಲ. ನೀವು ನಿಮ್ಮ ಸತ್ಯದೊಂದಿಗೆ ಮಾತ್ರ ಬದುಕಲು ಸಾಧ್ಯ. ಭಯಕ್ಕೆ ಕಾರಣವೇನು? ಆಲೋಚನೆಯೇ। ಕಾಲವೇ? ನಾನು ಈಗ ಬದುಕುತ್ತಿದ್ದೇನೆ, ನೀವು ೀಗ ಬದುಕುತ್ತಿದ್ದೀರಿ. ನಾನು ನಾಳೆ ಸಾಯಬಹುದು ಅಥವಾ ನಾನು ನನ್ನ ಕೆಲಸ ಕಳೆದುಕೊಳ್ಳಬಹುದು. ಬ್ಯಾಂಕಿನಲ್ಲಿ ನನ್ನ ಹಣವಿದೆ, ಆದರೆ ಬ್ಯಾಂಕು ದಿವಾಳಿಯಾಗಬಹುದು. ಈ ತೆರೆನಾದ ಭಯ ಸಲ್ಲದು.

-ಜಿಡ್ಡುಕೃಷ್ಣಮೂರ್ತಿ

**ವಿಚಾರಬಿಂದು : : ನೀವು ಹೆದರುವಂತಹ ಸನ್ನಿವೇಶ ಜೀವನದಲ್ಲಿ ಎದುರಾಗಿದೆ ಅಂದರೆ, ನಿಮ್ಮ ಧೈರ್ಯವನ್ನು ಪ್ರದರ್ಶಿಸುವ ಅವಕಾಶ ದೊರೆತಿದೆ ಎಂದರ್ಥ. -ಅನಾಮಿಕ**

# ಜ್ಞಾನ ಶಾಖೆಗಳ ವಿರೋಧವೇ ಅಸಹಿಷ್ಣುತೆಯ ಮೂಲ

ಕಳೆದ ವಾರ ಈ ಅಂಕಣದಲ್ಲಿ ಚರ್ಚಿಸಿದ್ದ ಸದ್ಯದ ಸಾಹಿತ್ಯಕ ಸಾಂಸ್ಕೃತಿಕ ಲೋಕದ ಏಕಮುಖ ಪ್ರವಾಹವನ್ನು ಕುರಿತಂತೆ ಸಾಕಷ್ಟು ಪ್ರತಿಕ್ರಿಯೆ ಮತ್ತು ಮೂದಲಿಕೆಗಳು ಬಂದ ಕಾರಣ ಮತ್ತೆ ಆ ಅದೇ ಸಂಗತಿಯನ್ನು ಮತ್ತೊಂದು ಬಗೆಯಿಂದ ಬಗೆಯುವ ಅನಿವಾರ್ಯತೆ ಉಂಟಾಗಿದೆ.

### ಅಸಹಿಷ್ಣುತೆ ಹುಯಿಲು

ಸುಮಾರು ಎರಡು-ಮೂರು ವರ್ಷಗಳ ಹಿಂದೆ ದೇಶದಲ್ಲಿ ಇದ್ದಕ್ಕಿದ್ದಂತೆ ಅಸಹಿಷ್ಣುತೆಯ ಒಂದು ದೊಡ್ಡ ಹುಯಿಲನ್ನು ಕೆಲವು ಸಾಹಿತಿಗಳು, ಕಲಾವಿದರು ಎಬ್ಬಿಸಿದರು. ಪ್ರಶಸ್ತಿ ವಾಪಸಾತಿ ಇತ್ಯಾದಿ ಪ್ರಹಸನಗಳಾದವು. ದೊಡ್ಡವರೆನಿಸಿಕೊಂಡಿದ್ದ ಹಲವು ಸಿನಿಮಾ ತಾರೆಯರು, ಸಾಹಿತಿಗಳೂ ಈ ದೇಶದಲ್ಲಿ ವಾಸ ಮಾಡುವುದು ದುಸ್ತರವೆಂಬಂತೆ ಪೋಸು ಕೊಟ್ಟು ಸುದ್ದಿಯಾದರು. ಆದರೆ ಒಬ್ಬರೂ ದೇಶ ಬಿಟ್ಟು ಹೋಗಲಿಲ್ಲ ಅನ್ನುವುದು ಬೇರೆ ಮಾತು! ಇರಲಿ, ಈ ಅಸಹಿಷ್ಣುತೆಯ ಕೂಗಿನ ಹಿಂದಿನ ಕಾರಣವೇನು ಎಂಬುದು ಈಗ ಬಹುತೇಕ ಎಲ್ಲರಿಗೂ ಅರ್ಥವಾಗಿದೆ. ಈ ಶತಮಾನದ ಆರಂಭದ ವರ್ಷಗಳಲ್ಲಿ ಸುದ್ದಿ ಮಾಧ್ಯಮಗಳು ವಿಸ್ತಾರಗೊಂಡಾಗ ಅಂದರೆ ಹಲವು ವಾರ್ತಾ ವಾಹಿನಿಗಳು, ವೃತ್ತ ಪತ್ರಿಕೆಗಳು, ಅಂತರ್ಜಾಲದ ಪುಟಗಳು ಮುಂತಾದವಲ್ಲಿ ಎಡ ಅಥವ ಬಲದ ಬಲದ ಮೇಲೆ ಚಿಂತಕರ ಪುಂಖಾನುಪುಂಖ ಅಭಿಪ್ರಾಯಗಳು ರೂಪಿಸಲ್ಪಡುತ್ತಿದ್ದವು. ಮತ್ತು ಹಾಗೆ ಸೃಷ್ಟಿಯಾದ ಮಿಥ್ಯೆಗಳು ಅಥವಾ ವ್ಯಾಖ್ಯಾನ ಅಪವ್ಯಾಖ್ಯಾನಗಳ ಮೂಲಕವೇ ಸಮೂಹ ಸನ್ನಿಯನ್ನು ಬಿತ್ತಿ ವಿಪುಲ ಬೆಳೆಯನ್ನೂ ಬೆಳೆಯಲಾಗುತ್ತಿತ್ತು. ಆದರೆ ಈಗೆರಡು ಮೂರು ವರ್ಷಗಳ ಹಿಂದೆ ಯಾವಾಗ ಸ್ಮಾರ್ಟ್ ಫೋನು ಮತ್ತು ಅಂತರ್ಜಾಲ ಎಲ್ಲರಿಗೂ ಲಭ್ಯವಾಗಿ ಬ್ಲಾಗು, ಫೇಸ್‌ಬುಕ್, ಟ್ವೀಟರುಗಳು ಎಲ್ಲರ ಕೈಬೆರಳುಗಳಿಗೂ ಸಿಲುಕಿ ಜನರಿಗೆಲ್ಲ ತಮ್ಮ ಅಭಿಪ್ರಾಯಗಳನ್ನು ಹೇಳಲು ಮುಕ್ತ ಸ್ವಾತಂತ್ರ್ಯ ದೊರೆಯಿತೋ ಅದರ ದೊಡ್ಡ ಹೊಡೆತ ಬಿದ್ದದ್ದು ಈ ತಥಾಕಥಿತ ಸಂಕೀರ್ತನಗಾರರಿಗೆ.


-ಡಿ.ಎಸ್.ರಾಮಸ್ವಾಮಿ,
ಅರಸೀಕೆರೆ, ಮೊ : 9844556820


### ಮೂಲಚಿಂತನೆ ಪ್ರಶ್ನೆ

ಅಸಹಿಷ್ಣುತೆಯ ಕೂಗು ಎಬ್ಬಿಸಿದವರಿಗಂತೂ ಜನಸಾಮಾನ್ಯರ ಪ್ರಶ್ನೆಗಳು ಅವರ ಮೂಲ ಚಿಂತನೆಯನ್ನೇ ಪ್ರಶ್ನೆ ಮಾಡಿದ್ದವು. ಅಲ್ಲಿಯವರೆಗೂ ದೇಶದಲ್ಲಿದ್ದ ಸಹೃದಯರೆಲ್ಲರೂ ಅವಲಂಬಿಸಿದ್ದ ಅಂದರೆ ಓದುತ್ತಿದ್ದ/ ಕೇಳುತ್ತಿದ್ದ/ನೋಡುತ್ತಿದ್ದ ಮಾಧ್ಯಮಗಳ ಮೇಲೆ ಏಕಸ್ವಾಮ್ಯವನ್ನು ಹೊಂದಿದ್ದ ಆ ಒಂದು ವರ್ಗದ ಮಂದಿಗೆ ತಾವು ಹೇಳಿದ್ದೆಲ್ಲವನ್ನೂ, ತಮ್ಮ ಅಪವ್ಯಾಖ್ಯಾನಗಳೆಲ್ಲವನ್ನೂ ನಂಬಿ ಕೂರುವವರು ಮಾತ್ರವಲ್ಲದೇ ಅದನ್ನು ಪ್ರಶ್ನೆಮಾಡುವವರು ಕೂಡ ಇದ್ದಾರೆ ಎನ್ನುವುದು ಬಹಳ ತಡವಾಗಿ ತಿಳಿಯ ತೊಡಗಿತು. ಸಾಹಿತ್ಯಕ ಸಾಂಸ್ಕೃತಿಕ ಲೋಕದಲ್ಲಿ ಏಕಸ್ವಾಮ್ಯ ಸಾಧಿಸಿದ್ದ ಸಾಹಿತಿ/ಕಲಾವಿದರಿಗಿಂತ ಹೆಚ್ಚು ಬುದ್ಧಿವಂತರಾದವರು, ಇವರಿಗಿಂತ ಹೆಚ್ಚು ಚೆನ್ನಾಗಿ ಸಮಾಜ/ಸಂಸ್ಕೃತಿ/ಸನ್ನಿವೇಶಗಳನ್ನು ಗ್ರಹಿಸಬಲ್ಲವರು ಮತ್ತು ಇವರ ಅಪಪ್ರಲಾಪಗಳು ತಪ್ಪೆಂದು ಗೊತ್ತಿದ್ದ ಮಂದಿ ಹಿಂದೆಯೂ ಇದ್ದರು. ಆದರೆ ಅವರು ಬೇರೆಬೇರೆ ಕ್ಷೇತ್ರಗಳಲ್ಲಿ ಇದ್ದವರಾದುದರಿಂದ ಸಾಹಿತಿ/ಕಲಾವಿದರಿಗಿರುವಷ್ಟು ಭಾಷಾ ಪ್ರಾವೀಣ್ಯವಾಗಲೀ ಇವರಷ್ಟು ಸಮರ್ಥ ಅಭಿವ್ಯಕ್ತಿ ಕೌಶಲವಾಗಲೀ ಇಲ್ಲದ್ದರಿಂದ ಅವರ ಮಾತುಗಳು ಕೇಳಿಬರುವುದು ವಿರಳವಾಗಿತ್ತು. ಅರ್ಥಾತ್ ಅವರಿಗೆ ಮಾಧ್ಯಮಗಳಲ್ಲಿ/ ವಿಚಾರಗೋಷ್ಠಿಗಳಲ್ಲಿ ಅವಕಾಶ ತುಂಬ ಸೀಮಿತವಾಗಿತ್ತು.



### ಎದೆಗಾರಿಕೆ ಇಲ್ಲ

ನಮ್ಮ ದೇಶದ ದೊಡ್ಡದೊಡ್ಡ ವಿಜ್ಞಾನಿಗಳು/ಬ್ಯಾಂಕರುಗಳು/ ಉದ್ಯಮಿಗಳು/ವಿದೇಶಕ್ಕೆ ಅವಕಾಶ ಅರಸಿ ಹೋದವರ ಪೈಕಿ ಕೆಲವರಾದರೂ ಸಾಹಿತ್ಯ ಮತ್ತು ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೆ (ಇದ್ದರೂ ಅವರ ಸಂಖ್ಯೆ ತೀರ ಕಡಿಮೆ) ಬಹುಶಃ ಈ ದೇಶದ ಸಾಹಿತ್ಯಕ ಸಾಂಸ್ಕೃತಿಕ ಲೋಕ ಇಷ್ಟು ಅಧೋಗತಿಗಿಳಿಯುತ್ತಿರಲಿಲ್ಲ. ಏಕೆಂದರೆ ಬದುಕನ್ನು ಕಲಿಸಿ ದೇಶದ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುವ ಕೆಲಸ ಮಾಡಬೇಕಿದ್ದ ದೇಶದ ಹಲವು ವಿಶ್ವವಿದ್ಯಾಲಯಗಳು ವಿದ್ಯೆಗಿಂತಲೂ ಗುಂಪುಗಾರಿಕೆಯನ್ನು, ನಕ್ಸಲ್ ಸಿದ್ಧಾಂತವನ್ನು ಮತ್ತು ವಿವಿಧತೆಯಲ್ಲಿನ ಏಕತೆಯನ್ನು ಪ್ರಶ್ನಿಸುವ ಮತ್ತು ಪರಂಪರೆಯನ್ನು ಗೇಲಿ ಮಾಡುವ ಸಿದ್ಧಾಂತಗಳನ್ನು ಕಲಿಸಲು ತೊಡಗಿದ್ದವು. ಕೆನೆಪದರದ ಮೇಲಣ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಅಥವ ವೈದ್ಯ ಕೀಯ ಕಲಿಕೆಗೆ ತೊಡಗಿದ್ದರು. ಅಲ್ಲಿಗೆ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಕಲಿಯಲು ಹೋದವರೆಲ್ಲ ಕೆನೆಪದರದಲ್ಲಿಲ್ಲದ ಅಂದರೆ ಸಾಮಾನ್ಯ ಬುದ್ಧಿಮತ್ತೆಯ ಮತ್ತು ಬಾಯಿಪಾಠ ಮಾಡಿಕೊಂಡೇ ಪರೀಕ್ಷೆ ಪಾಸು ಮಾಡುವವರಾಗಿದ್ದರು. ಹಾಗಾಗಿ ವಿವಿಗಳ ಅಧ್ಯಾಪಕರನ್ನು ಪ್ರಶ್ನಿಸುವ ಎದೆಗಾರಿಕೆ ಇಲ್ಲದ ಮತ್ತು ಅಧ್ಯಾಪಕರು ಹೇಳಿದುದೇ ಸತ್ಯವೆಂದು ನಂಬುವ ಬುದ್ಧಿಮತ್ತೆ ಅವರದಾದ್ದರಿಂದ ಸುಲಭವಾಗಿ ಇಂಥ ವಿದ್ಯಾರ್ಥಿಗಳಿಗೆ ಸಮಾಜದ ಅನಿಷ್ಟಗಳಿಗೆಲ್ಲ ಭಾರತೀಯ ಪರಂಪರೆಯೇ ಕಾರಣವೆಂಬ ಏಕ ಸೂತ್ರವನ್ನು ಹೇಳಿಕೊಡಲಾಯಿತು ಮತ್ತು ಅದನ್ನೇ ನಂಬುವಂತೆ ಮಾಡಲಾಯಿತು.

### ಏಕಸ್ವಾಮ್ಯಕ್ಕೆ ದೊಡ್ಡ ಪೆಟ್ಟು

ಯಾವಾಗ ಹೊಸ ಕಾಲದ ಮಾಧ್ಯಮಗಳು ಅದರಲ್ಲೂ ವಿಶೇಷವಾಗಿ ಸಾಮಾಜಿಕ ಜಾಲತಾಣಗಳು ಎಲ್ಲರಿಗೂ ದೊರೆಯುವಂತಾಯಿತೋ ಆವಾಗ ಜನಸಾಮಾನ್ಯರೂ ತಮಗೆ ತೋಚಿದ ರೀತಿಯಲ್ಲಿ ಬದುಕನ್ನೂ, ಬದುಕಿನ ವಿವಿಧ ಆಯಾಮಗಳನ್ನೂ ಹಂಚಿಕೊಳ್ಳತೊಡಗಿದರು. ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ಯಾರ ಹಂಗಿಗೂ ಬೀಳಬೇಕಿಲ್ಲ ಎಂಬ ಸನ್ನಿವೇಶ ಅಂತರಜಾಲದಿಂದಾಗಿ ನಿರ್ಮಾಣವಾದಾಗ ಕೆಲವರ ಏಕಸ್ವಾಮ್ಯಕ್ಕೆ ದೊಡ್ಡ ಪೆಟ್ಟು ಬಿತ್ತು.

### ಸಹಿಸಿಕೊಳ್ಳುವುದು ಆಗಿತ್ತು

ಆಗ ಸಮಾಜದ ಋಣದಲ್ಲಿದ್ದೂ ಸಮಾಜದ ವಿರುದ್ಧವೇ ಮಾತನಾಡುತ್ತಿದ್ದವರಿಗೆ ಅನ್ನಿಸಿದ್ದು: ಎಲಾ! ನಾವಿಷ್ಟು ವರ್ಷ ಹೇಳಿದ್ದನ್ನು ಪ್ರಶ್ನೆ ಮಾಡುವವರೇ ಇರಲಿಲ್ಲ; ನಮ್ಮನ್ನು ಇಷ್ಟು ವರ್ಷ ಸಹಿಸಿಕೊಂಡವರು ಈಗ ಸಹಿಸುತ್ತಿಲ್ಲ. ಈಗ ನಮ್ಮನ್ನೇ ಪ್ರಶ್ನೆ ಮಾಡುತ್ತಿದ್ದಾರೆ, ನಮ್ಮನ್ನು ಸಹಿಸಿಕೊಳ್ಳಬೇಕಾದವರು ಹೀಗೆ ಮಾಡಿದರೆ ಹೇಗೆ? ಇದು ಅಸಹಿಷ್ಣುತೆಯಲ್ಲವೇ? ಎಂದು ಬೊಬ್ಬೆ ಆರಂಭ ವಾಯಿತು!! ಸಹಿಸುವುದು ಎನ್ನುವ ಶಬ್ದದ ಅರ್ಥವನ್ನು ನಾವೀಗ ಪುನರವಲೋಕಿಸಬೇಕಿದೆ ನಾವು ನೋವನ್ನು 'ಸಹಿಸುತ್ತೇವೆ'. ಕಷ್ಟವನ್ನು 'ಸಹಿಸುತ್ತೇವೆ'. ದುರ್ವಾಸನೆಯನ್ನು 'ಸಹಿಸುತ್ತೇವೆ'. ಹಾಗೆಯೇ ಇವರ ಅಪಕಥನಗಳನ್ನೂ 'ಸಹಿಸಿಕೊಳ್ಳಬೇಕು' ಎಂಬುದು ಇವರ ಇಂಗಿತವಾಗಿತ್ತೇನೋ? ಅಂದರೆ ಇವರು ಹೇಳುತ್ತಿದ್ದುದು ಹೃದ್ಯವಾಗಿ ಸ್ವೀಕರಿಸಬೇಕಾದದ್ದು ಅಥವಾ ಸ್ವಾಗತಿಸ ಬೇಕಾದದ್ದು ಅಲ್ಲ; ಬದಲಾಗಿ ಸಹಿಸಿಕೊಳ್ಳಬೇಕಾದದ್ದು ಆಗಿತ್ತು!

### ಕನ್ನಡವೇ ಬಾರದ ಗುಹಾ

ಕನ್ನಡವೇ ಬಾರದ ರಾಮಚಂದ್ರ ಗುಹಾ ಥರದವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾದಾಗ ನಡೆದ ಚರ್ಚೆಗಳನ್ನು ಬರಹಗಳನ್ನು ಗಮನಿಸಿದರೆ ಸದ್ಯದ ಸಾಂಸ್ಕೃತಿಕ ವಲಯದ ಆಷಾಢಭೂತಿತನ ಗೊತ್ತಾಗುತ್ತದೆ.

> ಎಲಾ! ನಾವಿಷ್ಟು ವರ್ಷ ಹೇಳಿದ್ದನ್ನು ಪ್ರಶ್ನೆ ಮಾಡುವವರೇ ಇರಲಿಲ್ಲ; ನಮ್ಮನ್ನು ಇಷ್ಟು ವರ್ಷ ಸಹಿಸಿಕೊಂಡವರು ಈಗ ಸಹಿಸುತ್ತಿಲ್ಲ. ಈಗ ನಮ್ಮನ್ನೇ ಪ್ರಶ್ನೆ ಮಾಡುತ್ತಿದ್ದಾರೆ, ನಮ್ಮನ್ನು ಸಹಿಸಿಕೊಳ್ಳಬೇಕಾದವರು ಹೀಗೆ ಮಾಡಿದರೆ ಹೇಗೆ? ಇದು ಅಸಹಿಷ್ಣುತೆಯಲ್ಲವೇ? ಎಂದು ಬೊಬ್ಬೆ ಆರಂಭ ವಾಯಿತು!! ಸಹಿಸುವುದು ಎನ್ನುವ ಶಬ್ದದ ಅರ್ಥವನ್ನು ನಾವೀಗ ಪುನರವಲೋಕಿಸಬೇಕಿದೆ ನಾವು ನೋವನ್ನು 'ಸಹಿಸುತ್ತೇವೆ'. ಕಷ್ಟವನ್ನು 'ಸಹಿಸುತ್ತೇವೆ'. ದುರ್ವಾಸನೆಯನ್ನು 'ಸಹಿಸುತ್ತೇವೆ'. ಹಾಗೆಯೇ ಇವರ ಅಪಕಥನ ಗಳನ್ನೂ 'ಸಹಿಸಿಕೊಳ್ಳಬೇಕು' ಎಂಬುದು ಇವರ ಇಂಗಿತವಾಗಿತ್ತೇನೋ?

## ಸುದ್ದಿಯ ಬೆನ್ನು-6

ಏಕೆಂದರೆ ಇಂದಿನ ಅನೇಕ ವಾರ್ತಾವಾಹಿನಿಗಳ ಚರ್ಚಾ ಕಾರ್ಯಕ್ರಮಗಳಲ್ಲಿ ವಿಷಯ ತಜ್ಞರಿಗಿಂತಲೂ ವಿಷಯಾಸಕ್ತ ವಿಧ್ವಂಸಕರೇ ಇರುವುದನ್ನು ಗಮನಿಸಬಹುದು. ಬ್ಯಾಂಕಿಂಗ್ ಹಣಕಾಸು ಬಜೆಟ್ ಇತ್ಯಾದಿ ವಿಷಯಗಳ ಮೇಲಿನ ಚರ್ಚೆಯಲ್ಲಿ ಹುಡುಗು ಬುದ್ಧಿಯ ಬಾಲಿಶ ಹೇಳಿಕೆಗಳನ್ನು ಗಮನಿಸಬಹುದು.

### ಉಪನಿಷತ್ತು ಕಬ್ಬಿಣದ ಕಡಲೆ

ಜ್ಞಾನಶಾಖೆಗಳ ಕುರಿತಂತೆ ಇರುವ ಭಾರತೀಯ ಪರಿಕಲ್ಪನೆಗಳಿಗೆ ಕಿಂಚಿತ್ತು ಗೌರವವನ್ನು ಕೊಡದಂತೆ ಮತ್ತದನ್ನು ಅಪ್ಪಿ ತಪ್ಪಿಯೂ ಗ್ರಹಿಸದಂತೆ ರೂಪಿಸಲಾಗಿರುವ ಸಿಲಬಸ್ಸನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಜ್ಞಾನ ಭಂಡಾರವೇ ಆಗಿರುವ ಉಪನಿಷತ್ತು ಕಬ್ಬಿಣದ ಕಡಲೆಯಾಗಿದೆ. ಏನಕೇನ ಕಾರಣ ಕೊಟ್ಟು ಸಂಸ್ಕೃತ ಕಲಿಕೆಯನ್ನು ದೂರ ಮಾಡಿದವರ ಉದ್ದೇಶವೇ ಶಾಸ್ತ್ರಆಗಮ, ವೇದ ಉಪನಿಷತ್ತು, ಸ್ಮೃತಿ ಶೃತಿ ಇತ್ಯಾದಿಗಳನ್ನು ದೂರ ಇಡುವುದಾಗಿತ್ತು.

### ಅಸಹಿಷ್ಣುತೆ ಮೂಲ

ಜ್ಞಾನದ ವೃದ್ಧಿಗೆ ಅದರ ಮೂಲಮೌಲ್ಯಗಳನ್ನು ಎತ್ತಿ ಚರ್ಚಿಸಬೇಕು. ವೇದಕಾಲೀನ ಸಂಸ್ಕೃತಿಯಾಚೆಗೂ ಚಾಚಿ ಬೆಳೆದ ಬೌದ್ಧ, ಜೈನ, ವಚನ ಚಳವಳಿಗಳ ಅಂತಃಸತ್ವವನ್ನು ಪರಿಶೀಲಿಸುವ ತಾಳ್ಮೆ ಮತ್ತು ಜಾಣ್ಮೆ ಬೇಕು. ವೈದಿಕಾಚರಣೆಯನ್ನು ಧಿಕ್ಕರಿಸಿಯೇ ಬೆಳೆದ ಬದುಕಿಗೆ ಸ್ಪಷ್ಟ ಅರ್ಥ ಮತ್ತು ವ್ಯಾಪಕತೆಯನ್ನು ಕೊಟ್ಟ ಸಿದ್ಧರ ಯೋಗಿಗಳ ಮತ್ತು ಅವಧೂತ ಪರಂಪರೆಯ ಅರಿವು ಬೇಕಾಗುತ್ತದೆ. ಆಗಿಹೋದ ನಮ್ಮೆಲ್ಲ ತತ್ವಪದಕಾರರ ಮೂಲ ಆಶಯವೇ ಬಹುತ್ವದ ಆಧಾರದ ಮೇಲೆ ನಿಂತಿತ್ತು. ಧರ್ಮವೆಂಬುದು ಜೀವನ ಪಥವಾಗಿತ್ತೇ ವಿನಾ ಅದು ಈಗಿನ ರಿಲಿಜನ್ ಆಗಿರಲಿಲ್ಲ. ಇದನ್ನೆಲ್ಲ ವ್ಯಾಪಕವಾಗಿ ಚರ್ಚಿಸಲು ತಕ್ಕುನಾದ ವೈಚಾರಿಕ ಬುದ್ಧಿಯೂ ಬೇಕು. ಆದರೆ ಕೇವಲ ವಾದಕ್ಕೆ ಪ್ರತಿವಾದ ಹೂಡುವ ಮತ್ತು ಪ್ರಶ್ನಿಸಲೇ ಬೇಕೆಂಬ ಏಕೈಕ ಕಾರಣಕ್ಕೆ ವಿರೋಧಿಸುವ ನಿಲುವು ಬೌದ್ಧಿಕತೆಗೆ ಹಿಡಿದ ಗ್ರಹಣವಾಗಿದೆ. ಅಸಹಿಷ್ಣುತೆ ಎಂಬ ಪ್ರಲಾಪದ ಮೂಲವಾಗಿದೆ.

( ಈ ಬರಹಕ್ಕೆ ಶ್ರೀ ಅಜಕ್ಕಳ ಗಿರೀಶ ಭಟ್ಟ ಅವರ ಮುಖ ಪುಸ್ತಕದ ಲೇಖನ ಪ್ರೇರಣೆಯಾಗಿದೆ)

# ನವಣೆ ಹಾಲುಬಾಯಿ



### ಸಾಮಗ್ರಿ

1. ನವಣೆ 2 ಕಪ್
2. ಕಾಯಿ ತುರಿ : 2 ಕಪ್
3. ಬೆಲ್ಲದ ಪುಡಿ : 2ಕಪ್
4. ಏಲಕ್ಕಿ ಪುಡಿ : 1/2 ಚಮಚ

### ಮಾಡುವ ವಿಧಾನ

ನವಣೆಯನ್ನು 8-10 ಗಂಟೆಗಳ ಕಾಲ ನೆನೆಸಿ, ತೆಂಗಿನ ಕಾಯಿ ತುರಿಯೊಂದಿಗೆ ರುಬ್ಬಿ, ನಂತರ ಬೆಲ್ಲದ ಪುಡಿಯನ್ನು ಈ ಮಿಶ್ರಣಕ್ಕೆ ಬೆರೆಸಿ ಚೆನ್ನಾಗಿ ನುಣ್ಣಗೆ ಮಾಡಬೇಕು. ನಂತರ ಇದನ್ನು ಒಂದು ತೆಳುವಾದ ಬಟ್ಟೆಯಲ್ಲಿ ಸೋಸಿ, ದಪ್ಪತಳದ ಪಾತ್ರೆ ಅಥವಾ ಬಾಣಲೆಯಲ್ಲಿ ಹಾಕಿ ಸಣ್ಣ ಉರಿಯಲ್ಲಿ ಹಾಗೆ ತಿರುಗಿಸುತ್ತಿರಬೇಕು. ಬೆಂದ ನಂತರ ಅದಕ್ಕೆ ಏಲಕ್ಕಿ ಪುಡಿ ಉದುರಿಸಿ 2-3 ಚಮಚ ತುಪ್ಪವನ್ನು ಹಾಕಿ ನಂತರ ತುಪ್ಪ ಸವರಿದ ತಟ್ಟೆಗೆ ಹಾಕಿ ಆರಲು ಬಿಡಿ, ನಂತರ ಬೇಕಾದ ಆಕಾರಕ್ಕೆ ಕತ್ತರಿಸಿದರೆ ರುಚಿಯಾದ ನವಣೆ ಹಾಲುಬಾಯಿ ಸವಿಯಲು ಸಿದ್ಧ.


-ಪದ್ಮಶರ್ಮ,
ಮೊ.9844972714, ಹಾಸನ


# ಗೋಪ್ಯದ ಮುಸುಕಿಲ್ಲದ ಬದುಕು

ಹಾಸಿಗೆ ಎಂದ ತಕ್ಷಣ ಮನಸ್ಸಿನಲ್ಲಿ ಮೂಡುವುದು ವಿಶ್ರಾಂತಿಗೆ ಒಂದು ಸ್ಥಳ. ದಿನದ ಅವಿಶ್ರಾಂತ ದುಡಿಮೆಯ ನಂತರ ಮೈ, ಮನಸ್ಸಿಗೆ ನೆಮ್ಮದಿ ಕೊಡುವುದು ಹಾಸಿಗೆ. ಅಂದಿನ ದಣಿವನ್ನು ನಿವಾರಿಸಿ ಮರುದಿನದ ಜೀವನಕ್ಕೆ ನವ ಉತ್ಸಾಹ ತುಂಬುವ ಸಾಧನ. ಸುಂದರ ಸ್ವಪ್ನಗಳ ಹೂದೋಟದಲ್ಲಿ ವಿಹರಿಸುವ ತಾಣ. ಪುಟ್ಟ ಮಕ್ಕಳು ಎಚ್ಚರವಾದ ನಂತರವೂ ಹಗುರವಾಗಿ ಕಣ್ಮುಚ್ಚಿ ಆ ದಿನ ಆಡುವ ಆಟಗಳ, ಮಾಡುವ ಚೇಷ್ಟೆಗಳ ಕನಸು ಹೆಣೆಯುವ ಮಾಯಾ ಸ್ಥಳ. ತಾಯ ಗರ್ಭ ಇನ್ನೂ ಜನಿಸದ, ಜನಿಸಲಿರುವ ಶಿಶುವಿನ ಬೆಚ್ಚನೆಯ ಸುರಕ್ಷಿತ ಹಾಸಿಗೆ. ಅದರಂತೆಯೇ ಹಕ್ಕಿ ಪಕ್ಷಿಗಳೂ ಮೊಟ್ಟೆಗಳನ್ನು ಸಿದ್ಧಪಡಿಸಿದ ಮೆತ್ತನೆಯ ಹುಲ್ಲು ಹಾಸಿನ ಮೇಲೆ ಇಡುತ್ತವೆ. ಅವು ಮೊಟ್ಟೆಯೊಡೆದು ಬಂದ ಕೂಡಲೇ ಮೆದುವಾದ ಹಾಸಿಗೆ. ಪ್ರಕೃತಿ ಹೀಗೆ ಹುಟ್ಟಲಿರುವ, ಹುಟ್ಟಿದ ಪ್ರತಿಯೊಂದು ಜೀವಿಗೂ ಹಾಸಿಗೆ ಸಿದ್ಧಪಡಿಸಿರುತ್ತದೆ. ಸೂರ್ಯೋದಯದ ನಂತರವೂ ಸೋಮಾರಿಯಾಗಿ ಕಾಲು ಚಾಚಿ ಹಾಸಿಗೆಯಲ್ಲೇ ಮಲಗಿರುವವರನ್ನು ಕಂಡು ಸರ್ವೇ ಸಾಮಾನ್ಯವಾಗಿ ಹಿರಿಯರು ಹೇಳುವ ಮಾತು, ಹೆಬ್ಬಾವಿನ ಹಾಗೆ ಬಿದ್ದುಕೊಂಡಿರಬೇಡ. ಮನೆಗೆ ದರಿದ್ರ ಬಡಿಯುತ್ತದೆ ಎನ್ನುವುದು. ಹಾಸಿಗೆ ಸೋಮಾರಿತನದ ತಾಣವೂ ಎಂದಾಯಿತು.


ಶ್ರೀಲತ ಎಸ್.
ನಿ॥ ಶಿಕ್ಷಕಿ, ಹಾಸನ
ಮೊ: 9480226853




ಶ್ರೀ ಶಂಕರರು ಭಜ ಗೋವಿಂದಮ್‌ನಲ್ಲಿ ಹೀಗೆಂದು ತಿಳಿಸುತ್ತಾರೆ;

ಸುರಮಂದಿರ ತರು ಮೂಲ ನಿವಾಸಃ
ಶಯ್ಯಾ ಭೂತಲಮಜಿನಂ ವಾಸಃ।
ಸರ್ವಪರಿಗ್ರಹ ಭೋಗತ್ಯಾಗಃ
ಕಸ್ಯ ಸುಖಂನ ಕರೋತಿ ವಿರಾಗಃ।

ಯಾರು ತನ್ನೆಲ್ಲಾ ಸಂಪತ್ತನ್ನೂ ಮತ್ತು ಸಂತೋಷಗಳನ್ನೂ ತ್ಯಾಗ ಮಾಡುತ್ತಾನೋ ಅಂತಹ ವ್ಯಕ್ತಿಗೆ ಭೂ ತಾಯಿಯ ಮಡಿಲಲ್ಲಿ ಮರದಡಿಯ ಹಾಸಿಗೆಯಲ್ಲೇ ಸುಖ ನಿದ್ರೆ ಬರುತ್ತದೆ. ಆದರೆ ತಾವು ಬದುಕಿರುವಷ್ಟು ಕಾಲವೂ ಸುಖ ಸಂಪತ್ತನ್ನು ಅನುಭವಿಸಬೇಕು ಎಂದು ಭಾವಿಸುವವರಿಗೆ ಎಂತಹ ಸುಪ್ಪತ್ತಿಗೆಯೂ ಸುಖ ನಿದ್ರೆ ನೀಡಲಾರದು. ಹಣ ಕೇವಲ ಹಾಸಿಗೆಯನ್ನು ಕೊಂಡುಕೊಡಬಹುದಷ್ಟೆ ಹೊರತು ನಿದ್ರೆಯನ್ನಲ್ಲ, ವಿಶ್ರಾಂತಿಯನ್ನಲ್ಲ.

### ಒಗಟ ಬಿಡಿಸು

ಹಾಸಿಗೆ ಇದ್ದಷ್ಟೇ ಕಾಲು ಚಾಚುವುದು ಜಾಣತನ. ಅಂದರೆ ತನ್ನ ಸಂಪಾದನೆಗೆ ತಕ್ಕಂತೆ, ಯೋಗ್ಯತೆಗನುಸಾರವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುವುದು ಹಾಗೂ ತನ್ನ ಬೇಕುಗಳಿಗೆ ಕಡಿವಾಣ ಹಾಕುವುದು. ಇಲ್ಲದಿದ್ದರೆ ನೀಡಿದ ಕಾಲನ್ನು ಮಡಚಲು ಬೇರೆಯವರು ಹೊಂಚುಹಾಕುತ್ತಲೇ ಇರುತ್ತಾರೆ. ಜೀವನ ಹೂವಿನ ಹಾಸಿಗೆಯೂ ಅಲ್ಲ, ಮುಳ್ಳಿನ ಬೇಲಿಯೂ ಅಲ್ಲ. ಜೀವನವನ್ನು ಸುಖ ದುಃಖಗಳ ಸಮನ್ವಯದಲ್ಲಿ ನಮಗೆ ಸಹನೀಯವಾಗುವಂತೆ ಮಾಡಿಕೊಂಡು ಬದುಕುವುದೇ ಜಾಣ್ಮೆ. ವರಕವಿ ಬೇಂದ್ರೆಯವರು ನಾನು ಬಡವಿ, ಆತ ಬಡವ ಒಲವೇ ನಮ್ಮ ಬದುಕು ಎಂಬ ಕವನದಲ್ಲಿ ಭೂತಾಯಿ ಹಾಸಿಗೆ, ಆಕಾಶ ಹೊದಿಕೆ ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ. ಒಬ್ಬನ್ನ ಹಾಸಿದ್ದೆ ಒಬ್ಬನ್ನ ಹೊದ್ದಿದ್ದೆ, ಒಬ್ಬನ್ನ ಎಳಕೊಂಡು ಮಲಗಿದ್ದೆ ಚಲುವ, ನೀ ಜಾಣನಾದರೆ ಬಿಡಿಸು ಈ ಒಗಟನ್ನು ಎನ್ನುತ್ತಾಳೆ ರಸಿಕ ಹೆಣ್ಣು. ಅದಕ್ಕುತ್ತರವನ್ನು ನಾ ಹಾಸಿಗೆ ಹಾಸಿದ್ದೆ, ಹೊದಿಕೆ ಹೊದ್ದಿದ್ದೆ, ದಿಂಬನ್ನು ಎಳಕೊಂಡು ಮಲಗಿದ್ದೆ ಚೆಲುವ ಎಂದು ಅವಳೇ ಉತ್ತರ ಕೊಡುತ್ತಾಳೆ.

### ಸತ್ಯದ ಅನಾವರಣ

ಹಾಸಿಗೆ ಹಾಸಿ ಮಲಗಲು ಮತ್ತು ಹೊದಿಕೆ ಹೊದೆಯಲು ಅಥವಾ ಗೌಸಿಕೊಂಡು ಮುಸುಕು ಹಾಕಿಕೊಳ್ಳಲು ಇರುವುದು. ಮುಸುಕಿನೊಳಗೆ ಏನು ನಡೆಯುತ್ತದೋ, ಅದು ಪ್ರಪಂಚದಿಂದ ಮರೆಯಾಗಿದೆ. ಅದು ಗುದ್ದೂ ಆಗಿರಬದು, ಹಾಸಿಗೆಗೆ ಸೇರಿಕೊಂಡ ತಿಗಣೆಯೂ ಆಗಿರಬಹುದು. ಆಡಲೂ ಅನುಭವಿಸಲೂ ಆಗದ್ದು. ಮುಸುಕಿನಲ್ಲಿದ್ದವರಿಗೆ ಹೊರಗಿನ ದೃಶ್ಯ ಗೋಚರ, ಆದರೆ ಹೊರಗಿನವರಿಗೆ ಅಲ್ಲಿ ನಡೆಯುವುದು ಸುಪ್ತ, ಗೋಪ್ಯ. ಅಂಕದ ಪರದೆ ಜಾರಿದ ಮೇಲೆ ನಾಟಕ ಇನ್ನು ಉಳಿದುಹುದೇ? ಆ ಪರದೆ ಅಥವಾ ಮುಸುಕು ತೆರೆದಾಗಲೇ ನಿಜವಾದ ಪ್ರಾತ್ಯಕ್ಷಿಕೆ, ಸತ್ಯದ ಅನಾವರಣ.

### ಸತ್ಕಾರ್ಯದ ಕೆಲಸ

ಮಹಾಭಾರತದ ಸಂಗ್ರಾಮದ ಸಮಯದಲ್ಲಿ ಪಿತಾಮಹ ಭೀಷ್ಮರ ಮಾತೆ ಗಂಗೆ ಅವನ ಮೃತ್ಯು ಶಯ್ಯೆ ಹರಡುವ ಸ್ಥಳದಲ್ಲಿ ಹಿಂದಿನ ಸಂಜೆ ಭೂವಾರಿದಳಂತೆ. ಮರಣದಲ್ಲಿ ಭೀಷ್ಮರಿಗೆ ಮಾತ್ರವಲ್ಲ ನಮಗೂ ಭೂಮಾತೆಯೇ ಹಾಸಿಗೆ. ಆದರೆ ನಮಗೆ ಭೂವಾರುವವರು ಯಾರು? ನಾವು ಜೀವಿತ ಸಮಯದಲ್ಲಿ ಮಾಡಿದ ಒಂದೊಂದು ಸತ್ಕಾರ್ಯವೂ ಆ ಕೆಲಸವನ್ನು ಮಾಡುತ್ತದೆ.

### ಹಾಸಿಗೆ ಇದ್ದಷ್ಟು ಕಾಲು ಚಾಚೋಣ

ಬಂಗಲೆಯ ಮುಂದಿರುವ ಲಾನ್ ಮನೆಯಲ್ಲಿ ನೆಲೆಸಿರುವ ಹರಿಯಾಲಿಯ, ಸುಖ ಸಂತೋಷದ ದ್ಯೋತಕ. ಆದರೆ ಹುಲ್ಲಿನ ಬೀಜವನ್ನು ಒಮ್ಮೆ ಬಿತ್ತಿದರೆ ಮುಗಿಯುವುದಿಲ್ಲ, ಪುನಃ, ಪುನಃ ಅದನ್ನು ಟ್ರಿಮ್ ಮಾಡುತ್ತಿರಬೇಕು. ಸಮವಾಗಿ ಕತ್ತರಿಸುತ್ತಿರಬೇಕು. ಕಳೆ ಬೆಳೆಯದಂತೆ ಎಚ್ಚರವಹಿಸಬೇಕು. ಹಾಗೆಯೇ ನಮ್ಮ ಬದುಕನ್ನೂ ಹಸನು ಮಾಡಿಕೊಳ್ಳಬೇಕು. ಎಲ್ಲಿ ಮಲಗಿದರೂ ಸುಖ ನಿದ್ರೆ ಬರುವಂತಹ ಗುಟ್ಟು ಗೋಪ್ಯದ ಮುಸುಕಿಲ್ಲದ ಬದುಕನ್ನು ನಮ್ಮದಾಗಿಸಿಕೊಳ್ಳೋಣ. ಹಾಸಿಗೆ ಇದ್ದಷ್ಟು ಕಾಲು ಚಾಚೋಣ.

> ಹಾಸಿಗೆ ಇದ್ದಷ್ಟೇ ಕಾಲು ಚಾಚುವುದು ಜಾಣತನ. ಅಂದರೆ ತನ್ನ ಸಂಪಾದನೆಗೆ ತಕ್ಕಂತೆ, ಯೋಗ್ಯ ತೆಗನುಸಾರವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುವುದು ಹಾಗೂ ತನ್ನ ಬೇಕುಗಳಿಗೆ ಕಡಿವಾಣ ಹಾಕು ವುದು. ಇಲ್ಲದಿದ್ದರೆ ನೀಡಿದ ಕಾಲನ್ನು ಮಡಚಲು ಬೇರೆಯವರು ಹೊಂಚುಹಾಕುತ್ತಲೇ ಇರುತ್ತಾರೆ.

# ಸೊಬಗನ್ನು ಹೆಚ್ಚಿಸುವ ಕೇಶಲಂಕಾರ

ಶೃಂಗಾರದಲ್ಲಿ ಕೇಶದ ಪಾತ್ರ ಬಹಳ ದೊಡ್ಡದು. ಕೇಶಲಂಕಾರದ ವಿವಿಧ ವರ್ಣನೆಗಳು ಸಮಕಾಲೀನ ಕಾವ್ಯಗಳಲ್ಲಿ ಲಭ್ಯ. ಇತಿಹಾಸದ ಸ್ಮಾರಕಗಳಲ್ಲಿ ಚಿತ್ರಿತವಾಗಿರುವ ಶಿಲ್ಪಗಳಲ್ಲಿ ವೈವಿಧ್ಯಮಯ ಕೇಶಲಂಕಾರವನ್ನು ನೋಡಬಹುದಾಗಿದೆ. ಕುಡಿವುಗುರಿಂದ ಮುಡಿಯ ತೀಡಿ , ಸಹಜ ದಿವ್ಯ ಸುಗಂಧವ ಮಾಡಿ, ಕೇಶಪಾಶವಂ ಮಾಡಿ, ಗಂಧ ತೈಲ ಪೂಸಿ ಚಂಪಕ ತೈಲ ದಿಂದ ಲೇಪಿಸಿದ ಮುಡಿಯು ನವಿಲಂತೆ ಕುಣಿಯುತಿಹುದು ಎಂಬ ಕವಿ ವರ್ಣನೆಯಲ್ಲಿ ಆ ಕಾಲದಲ್ಲಿ ಕೇಶಲಂಕಾರ ಸಾಕಷ್ಟು ಪ್ರಗತಿಯಲ್ಲಿತ್ತು ಎಂದು ತಿಳಿದು ಬರುತ್ತದೆ. ಗಂಧಧ ತೈಲ, ಚಂಪಕ ತೈಲದಿಂದ ಕೇಶವನ್ನು ಸಮೃದ್ಧಗೊಳಿಸಿಕೊಂಡು ವಿವಿಧ ವಿನ್ಯಾಸಗಳಲ್ಲಿ ಅವುಗಳನ್ನು ಬಂಧಿಸಲಾಗುತ್ತಿತ್ತು. ಅದುಅವರ ಸೌಂದರ್ಯ ವರ್ಧನೆಗೆ ಸಹಕಾರಿಯಾಗಿತ್ತು

### ಕೇಶಲಂಕಾರ ವರ್ಣನೆ

ಪ್ರಾಚೀನ ದೇವಾಲಯಗಳಲ್ಲಿ ವಿವಿಧ ಕೇಶಲಂಕಾರದ ಶಿಲ್ಪಗಳಿರುವುದು ಅವುಗಳಲ್ಲಿ ಮಹಿಳೆ ಮತ್ತು ಪುರುಷ ಶಿಲ್ಪಗಳ ಕೇಶವು ವಿವಿಧ ವಿನ್ಯಾಸಗಳಿಂದ ,ವಿವಿಧ ಆಭರಣಗಳಿಂದ ಸುಶೋಭಿತವಾಗಿರುವುದು ಎದ್ದು ಕಾಣುತ್ತಿದ್ದು ಭಾರತೀಯ ಶಿಲ್ಪಕಲೆಯ ಮೆರಗನ್ನು ಮತ್ತಷ್ಟು ಹೆಚ್ಚಿಸಿದೆ. ಶಿಲ್ಪಗಳಲ್ಲಿ ಮತ್ತು ಸಮಕಾಲೀನ ಬರಹಗಳಲ್ಲಿ ಈ ಕೆಳಗಿನ ರೀತಿಯ ವಿವಿಧ ಮುಡಿಗಳು, ತುರುಬುಗಳು ಮತ್ತು ಕೇಶಗಳ ಅಲಂಕರಣ ಅಭಿವ್ಯಕ್ತಗೊಂಡಿದೆ.


ಡಾ. ವಿದ್ಯಾ ಎಚ್.ಎನ್.
ಸರ್ಕಾರಿ ಕಲಾ ಕಾಲೇಜು ಹಾಸನ
ಮೊ:9448870802


1. ಬಿಡು ಮುಡಿ ತುರುಬು
2. ಮುತ್ತಿನ ಮುಡಿ ತುರುಬು
3. ಏಳು ಮುಡಿ ತುರುಬು
4. ಬಿಳಲುಡಿ ತುರುಬು
5. ಜಡೆ ತುರುಬು
6. ಗೋಡಂಬಿ ತುರುಬು
7. ತೆಕ್ಕ ತುರುಬು
8. ತೋರು ತುರುಬು
9. ಸೋಗೆ ತುರುಬು

ಮೊದಲಾದ ರೀತಿಯ ಕೇಶಾಲಂಕಾರಗಳ ವರ್ಣನೆ ಲಭ್ಯ.



### ಕೇಶಲಂಕಾರದ ಪೂರಕ ಸಾಮಗ್ರಿಗಳ ವರ್ಣನೆ

ಇವುಗಳ ಜೊತೆ ಕೇಶವನ್ನು ಅಲಂಕರಿಸುತ್ತಿದ್ದ ಬಗೆ ಬಗೆಯ ವಸ್ತುಗಳು ಸಹ ಉಲ್ಲೇಖವಾಗಿವೆ. ನೆತ್ತಿಯ ಮೇಲೆ ನಾಗರ ಬಿಲ್ಲೆ, ಜಡೆಯ ಮೇಲೆ ಜಡೆಬಿಲ್ಲೆ , ತುರುಬಿನ ಜೊತೆ ಧರಿಸುವ ತುರುಬು ಬಿಲ್ಲೆ , ಜಡೆಯ ತುದಿಗೆ ಕಟ್ಟುವ ಜಡೆ ಕಟ್ಟು , ಮೊದಲಾದವುಗಳು ಕಾವ್ಯಗಳಲ್ಲಿ ಉಲ್ಲೇಖಿತವಾಗಿದ್ದು ಶಿಲ್ಪ ಪ್ರಕಾರಗಳಲ್ಲಿಯೂ ಕಾಣ ಸಿಗುತ್ತವೆ. ಕನ್ನಡ ಸಾಹಿತ್ಯವು ಈ ಕೇಶಲಂಕಾರದ ವೈವಿಧ್ಯತೆಯನ್ನು ಮತ್ತಷ್ಟು ವರ್ಣಮಯವಾಗಿಸಿರುವುದು ಕಂಡು ಬರುತ್ತದೆ. ಕನ್ನಡದ ಕಾವ್ಯಗಳಲ್ಲಿ ವರ್ಣಿತವಾಗಿರುವ ಹಲವು ಜಡೆಗಳು ಸಾಹಿತ್ಯ ಪ್ರಕಾರದ ಸೊಬಗನ್ನು ಹೆಚ್ಚಿಸಿವೆ.

1. ಗಿರಿ ಜಡೆ
2. ಹೊಳೆ ಜಡೆ
3. ಕೊಂಡೆ ಜಡೆ
4. ಕಾಳ ಜಡೆ
5. ಬೆಳಕು ಜಡೆ
6. ಬಳ್ಳಿ ಜಡೆ
7. ಮೇಘ ಜಡೆ
8. ನಿಡು ಜಡೆ
9. ಮೇಲ್ಜಡೆ
10. ಕೋಟೆ ಜಡೆ
11. ಗಿರಿ ಜಡೆ
12. ಕೋಲು ಜಡೆ

ಕೆ ಎಸ್ ನರಸಿಂಹ ಮೂರ್ತಿ ಅವರ ಪಂಕ್ತಿಗಳಿವು . ಕಪ್ಪು ಕುರುಳನ್ನು ಬೆನ್ನ ಮೆಲೆಲ್ಲಾ ಹರಡಿದರೆ ದೂರದಲಿ ಗಿರಿಯ ಮೇಲೆ ಇಳಿದಂತೆ ಇರುಳ ಮಾಲೆ ಕವಿಯ ಕೇಶ ವರ್ಣನೆಯ ಅನನ್ಯತೆಯನ್ನು ಎತ್ತಿ ಹಿಡಿಯುತ್ತದೆ.

### ಆಧುನಿಕ ಕಾಲದಲ್ಲಿ ಕೇಶ ನಿರ್ವಹಣೆ

ಆಧುನಿಕ ಯುಗದಲ್ಲಿ ನಾವಿಂದು ನೋಡುವ ಬಹಳಷ್ಟು ಪ್ರಕಾರದ ಕೇಶ ಅಲಂಕಾರವು ನಮ್ಮ ಪ್ರಾಚೀನರಿಂದ ಪ್ರಭಾವಿತವಾಗಿದೆ ಎನ್ನಲು ಅಡ್ಡಿ ಇಲ್ಲ. ಆದರೆ ಇಂದು ನಮ್ಮ ಮಹಿಳೆಯರು ಕೇಶ ನಿರ್ವಹಣೆಯಲ್ಲಿ ವಿಪರೀತ ವೆನಿಸುವಷ್ಟು ಕೆಮಿಕಲ್ಸ್ ಬಳಕೆ ಮಾಡುತ್ತಾ ಮಾರುಕಟ್ಟೆಯಲ್ಲಿ ದೊರೆಯುವ ಎಲ್ಲಾ ರೀತಿಯ ಕೇಶತೈಲಗಳನ್ನು ಬಳಸಿ ನೋಡಿ ನಿರೀಕ್ಷಿತ ಫಲ ದೊರೆಯದೇ ಪದೇ ಪದೇ ಅವುಗಳನ್ನು ಬಳಸುವುದು ಕಂಡು ಬರುತ್ತದೆ. ಇದರ ನೇರ ಕಾರಣವಾಗಿ ಇಂದು ಮಹಿಳೆಯರ ಕೇಶ ವಿವಿಧ ರೀತಿಯಲ್ಲಿ ಅಲಂಕರಿಸಿಕೊಳ್ಳುವಷ್ಟು ಆರೋಗ್ಯಯುತವಾಗಿರುವುದಿಲ್ಲ. ಅದಕ್ಕೆ ಕೃತಕ ಕೇಶ ವಿನ್ಯಾಸಗಳನ್ನೇ ಬಳಸುತ್ತಾರೆ. ಆದರೂ ಮದುವೆ ಮೊದಲಾದ ಶುಭ ಸಂದರ್ಭಗಳಲ್ಲಿ ವಧು ವಿಗೆ ಉದ್ದ ಜಡೆಯ ಕೇಶಲಂಕಾರ ಇಂದೂ ಚಲಾವಣೆ ಯಲ್ಲಿದೆ. ಕೇಶದ ನಿರ್ವಹಣೆ ನಮ್ಮ ಆಧುನಿಕ ಕಾಲದಲ್ಲಿ ಸಮಯದ ಅಭಾವದಿಂದ ನಮ್ಮ ದೈನಂದಿನ ಆದ್ಯತೆಯ ಪಟ್ಟಿಯಲ್ಲಿ ಇಲ್ಲ.

### ವಿವೇಚನೆ ಎಲ್ಲರಲ್ಲಿರಲಿ

ಆದರೆ ಕೇಶವು ನಮ್ಮ ನಿರ್ವಹಿಸಲಾಗದ ದೀರ್ಘ ಸಮಯವನ್ನೇನೂ ಬೇಡುವುದಿಲ್ಲ. ನಮ್ಮ ದೈನಂದಿನ ಜೀವನ ಶೈಲಿ ಮತ್ತು ಉತ್ತಮ ಆಹಾರ ಆಯ್ಕೆಯಲ್ಲಿ ನಾವು ಎಡವದಂತೆ ಎಚ್ಚರ ಹೊಂದಿರಬೇಕು. ವಿಪರೀತ ಕಂಪ್ಯೂಟರ್ , ಟಿವಿ , ಮೊಬೈಲ್‌ಗಳ ವೀಕ್ಷಣೆ ಕಣ್ಣಿಗೆ ಮಾತ್ರ ಮಾರಕವಲ್ಲ ನಮ್ಮ ಕೇಶಗಳ ಬೆಳವಣಿಗೆಗೂ ಮಾರಕವೇ . ನಮ್ಮ ಮಕ್ಕಳಿಗೆ ಅಂಗಡಿಗಳಲ್ಲಿ ದೊರೆಯುವ ಕೇಶ ನಿರ್ವಹಣಾ ಸಾಮಗ್ರಿಗಳ ಕುರಿತು ತಿಳಿ ಹೇಳಿ. ಅತಿಯಾದರೆ ಎಲ್ಲವೂ ವಿಷ ಸಮಾನ ಎಂಬ ತಿಳವಳಿಕೆ ನೀಡಿ ಅವರನ್ನು ನೈಸರ್ಗಿಕವಾಗಿ ತಿದ್ದುವುದು ನಮ್ಮ ಪೋಷಕರ ಆದ್ಯ ಕರ್ತವ್ಯವಾಗಿದೆ. ಜಾಹೀರಾತುಗಳ ಮೂಲಕ ತೋರಿಸುವ ಕೇವಲ ಒಂದು ರೂಪಾಯಿಯ ಕೇಶದ ಸ್ಯಾಚೆ ನಮ್ಮ ಕೇಶವನ್ನು ಸದೃಢಗೊಳಿಸದು ಎಂಬ ವಿವೇಚನೆ ಎಲ್ಲರಿಗೂ ಇರಬೇಕು.

> ಆಧುನಿಕ ಯುಗದಲ್ಲಿ ನಾವಿಂದು ನೋಡುವ ಬಹಳಷ್ಟು ಪ್ರಕಾರದ ಕೇಶ ಅಲಂಕಾರವು ನಮ್ಮ ಪ್ರಾಚೀನರಿಂದ ಪ್ರಭಾವಿತವಾಗಿದೆ ಎನ್ನಲು ಅಡ್ಡಿ ಇಲ್ಲ. ಆದರೆ ಇಂದು ನಮ್ಮ ಮಹಿಳೆಯರು ಕೇಶ ನಿರ್ವಹಣೆಯಲ್ಲಿ ವಿಪರೀತ ವೆನಿಸುವಷ್ಟು ಕೆಮಿಕಲ್ಸ್ ಬಳಕೆ ಮಾಡುತ್ತಾ ಮಾರುಕಟ್ಟೆಯಲ್ಲಿ ದೊರೆಯುವ ಎಲ್ಲಾ ರೀತಿಯ ಕೇಶತೈಲಗಳನ್ನು ಬಳಸಿ ನೋಡಿ ನಿರೀಕ್ಷಿತ ಫಲ ದೊರೆಯದೇ ಪದೇ ಪದೇ ಅವುಗಳನ್ನು ಬಳಸುವುದು ಕಂಡು ಬರುತ್ತದೆ.

# ಈ ದೇಶ ಉಳಿಸಲು ಜಾತಿ ಬಿಡಬೇಕು



ಧರ್ಮದ ಕುರಿತು ಸರಿಯಾದ ತಿಳಿವಳಿಕೆ ಮತ್ತು ಅರ್ಥವಂತಿಕೆ ಇಲ್ಲದಿರುವುದು ಅಜ್ಞಾನವಾಗಿದೆ. ಧರ್ಮವೆಂದರೆ ಜ್ಞಾನವಲ್ಲ, ತ್ಯಾಗವಲ್ಲ, ಲಿಂಗವಲ್ಲ, ಜನಿವಾರವಲ್ಲ, ನಮಾಜು, ಪ್ರಾರ್ಥನೆ ಅಲ್ಲ. ಇವೆಲ್ಲವೂ ಧರ್ಮದ ಆಚರಣೆಗಳು ಅಷ್ಟೇ. ಈ ಆಚರಣೆಗಳು ಕ್ರಿಯೆ ಮೂಲಕ ಜ್ಞಾನ ಆದಾಗಲೇ ಧರ್ಮ ಎನಿಸಿಕೊಳ್ಳುತ್ತದೆ. ಧರ್ಮದಲ್ಲಿ ಮೂರು ಮಾರ್ಗಗಳಿವೆ. 1. ಚಿಂತನಾ ಮಾರ್ಗ, 2. ಆಚರಣಾ ಮಾರ್ಗ, 3. ಜೀವನ ವಿಧಾನ ಮಾರ್ಗವಾಗಿದೆ. ವ್ಯಕ್ತಿಯ ಸಮಷ್ಟಿ ಪ್ರಜ್ಞೆಯನ್ನು ಸುಂದರವಾಗಿಸುವ ಮೂಲಕ ಎತ್ತಿ ಹಿಡಿಯುವುದೇ ಧರ್ಮವಾಗಿದೆ. ಜಾಗತಿಕ ಧರ್ಮದಲ್ಲಿ ಹಲವು ಆಚರಣೆಗಳು ಇದ್ದು, ಅವು ಧಾರ್ಮಿಕ ಕ್ರಿಯೆಗಳಷ್ಟೇ ಆಗಿವೆ. ಮನುಷ್ಯನಲ್ಲಿರುವ ಮನುಷ್ಯತ್ವವನ್ನು ಕಾಣಬೇಕು. ಮನುಷ್ಯನನ್ನು ಪ್ರೀತಿಸುವುದೇ ಧರ್ಮವಾಗಿದೆ. ದೇಶದಲ್ಲಿ ಧರ್ಮವು ಆಸೆ, ಸ್ವಾರ್ಥ, ದುಷ್ಟತನದ ಕಾರಣಕ್ಕೆ ಧರ್ಮ ಧರ್ಮದ ನಡುವೆ, ಜಾತಿ ಜಾತಿಗಳ ನಡುವೆ ಘರ್ಷಣೆ ನಡೆಯುತ್ತದೆ. ಇವನಾರವ ಇವನಾರವ ಎಂದೆನಿಸದೇ, ಇವ ನಮ್ಮವ, ಇವ ನಮ್ಮವ ಎನಿಸಬೇಕು. ಇದು ಜಾಗತಿಕ ಸತ್ಯವಾಗಿದೆ. ಜಾತಿ ಎಂಬ ವಸ್ತುವಿಗೆ ನೇಣು ಹಾಕಬೇಕು. ದಯೆ ಇಲ್ಲದ ಧರ್ಮ ಯಾವುದಯ್ಯ ಎಂದು ಬಸವಣ್ಣನವರು ಹೇಳಿದ್ದಾರೆ. ಯಾವ ಧರ್ಮವೂ ಹಿಂಸೆ, ಭಯೋತ್ಪಾದನೆಯನ್ನು ಬೋಧಿಸಿಲ್ಲ. ಈ ದೇಶ ಉಳಿಸಬೇಕೆಂದರೆ ಜಾತಿಯನ್ನು ಬಿಡಬೇಕು. ಜಾತಿ ವಿಜಾತಿ ಎನಬೇಡ, ದೇವರು ಯಾವ ಜಾತಿಯನ್ನೂ ಮಾಡಿಲ್ಲ. ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ. ಮನುಷ್ಯರನ್ನು ಮನುಷ್ಯರಂತೆ ಕಾಣಬೇಕು. ಜಗತ್ತಿನಲ್ಲಿ ಗೋಚರ, ಖೇಚರ, ಜಲಚರ ಎಂಬ ಬರೀ ಮುರು ಜಾತಿಗಳಿವೆ. ಧರ್ಮಗಳು ಸೇವೆ ಮಾಡುವುದನ್ನು, ಪ್ರೀತಿಸುವುದನ್ನು, ಆರಾಧಿಸುವುದನ್ನು ಮಾತ್ರ ಬೋಧಿಸಿವೆ. ನಿಮಗೆ ನೀವೆ ಗುರುವಾಗಿ, ಶಿಷ್ಯನಾಗಿ, ಅರಿತುಕೊಂಡಾಗ ಅರಿವೇ ಗುರು ಆಗಬೇಕಾಗುತ್ತದೆ. ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅರ್ಚನೆ, ಪೂಜೆ ಧರ್ಮವಲ್ಲ, ಮಂತ್ರ ತಂತ್ರ ಧರ್ಮವಲ್ಲ, ಪರ ಧನ, ಪರಸ್ತ್ರೀ ಬಯಸದಿರುವುದೇ ಧರ್ಮವಾಗಿದೆ. ಮನುಷ್ಯನಿಗೆ ಅರಿವಿನ ಪ್ರಜ್ಞೆ ಮೂಡಬೇಕು. ಮನಸ್ಸು ಮಹಾಲಿಂಗವಾಗಬೇಕು. ಘನ ಮನವೇ ಮಾನವೀಯ ಪ್ರೇಮ, ಧರ್ಮವಾಗಿದೆ. ಮನುಷ್ಯ ದೇವರಾಗಬೇಕು. ದುರ್ಜನರ ಸಂಗ ಸಲ್ಲದು.

-ಶ್ರೀ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಮುಂಡರಗಿ